**ದಿನಾಂಕ 26-02-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ದೂರುದಾರರ ಪರ ಶ್ರೀ ಟಿ.ಎಸ್.ಎಸ್. ವಕೀಲರಿಂದಃ**

1. ನನ್ನ ವಿಳಾಸಕ್ಕೆ ಪೋಸ್ಟಮ್ಯಾನ ಪೂರ್ವಭಾವಿ ನೋಟೀಸನ್ನು ತಲುಪಿಸಿದ್ದರೂ ಸಹಾ, ನೋಟೀಸು ತಲುಪಿಲ್ಲ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಖಾತೆ ಬ್ಯಾಂಕ ಆಫ್ ಬರೋಡಾ, ಶಾಖೆ ತಿಳುವಳ್ಳಿಯಲ್ಲಿದೆ ಎಂದರೆ ಸರಿ. ನಿಪಿ-1 ನನ್ನ ಖಾತೆಗೆ ಸಂಬಂಧಿಸಿದ ಚೆಕ್ಕು ಎಂದರೆ ಸರಿ. ನಿಪಿ-1 ರಲ್ಲಿರುವ ನಿಪಿ-1(ಎ) ಸಹಿ ನನ್ನದು ಎಂದರೆ ಸರಿ. ನಿಪಿ-5 ರಲ್ಲಿರುವ ಸಹಿ ನನ್ನದು ಎಂದರೆ ಸರಿಯಲ್ಲ. ನಿಪಿ-1(ಎ) ಸಹಿ ಹಾಗೂ ನಿಪಿ-5 ರಲ್ಲಿರುವ ಸಹಿ ಒಂದೇ ರೀತಿ ಇರುತ್ತದೆ ಎಂದರೆ ಸರಿಯಲ್ಲ. ಈ ಎರಡೂ ಸಹಿಗಳು ಒಂದೇ ಇದ್ದರೂ ಸಹಾ, ವ್ಯತ್ಯಾಸಗಳು ಇವೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1(ಎ) ಸಹಿ ಹಾಗೂ ನಿಪಿ-5 ರಲ್ಲಿರುವ ಸಹಿ ನನ್ನದೇ ಅಂತಾ ರುಜುವಾತು ಪಡಿಸಲು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಬಹುದಾ ಎಂದರೆ ಸಾಕ್ಷಿ ಕಳುಹಿಸಬಹುದು ಅಂತಾ ನುಡಿಯುತ್ತಾರೆ.

2. ನಾನು ಹಾರ್ಡವೇರ ಶಾಪ್ ನಡೆಸುವುದರ ಜೊತೆಗೆ ರಿಯಲ್ ಎಸ್ಟೇಟ್ ಉದ್ಯೋಗ ಮಾಡುತ್ತೇನೆ ಎಂದರೆ ಸಾಕ್ಷಿ ರಿಯಲ್ ಎಸ್ಟೇಟ್ ಉದ್ಯೋಗ ಮಾಡುವುದಿಲ, ಆದರೆ ಹಾವೇರಿಯಲ್ಲಿ ಜಮೀನು ಖರೀದಿ ಮಾಡಿರುತ್ತೇನೆ ಅಂತಾ ನುಡಿಯುತ್ತಾರೆ. ನಾನು ರಿಯಲ್ ಎಸ್ಟೇಟ್ ಉದ್ಯೋಗ ಮಾಡಿಕೊಂಡಿದ್ದು, ರಾಣೆಬೆನ್ನೂರಿನಲ್ಲಿಯೂ

ಸೈಟುಗಳನ್ನು ನೋಡಿ ಹೋಗಿದ್ದೆ ಎಂದರೆ ಸರಿಯಲ್ಲ. ದೂರುದಾರರು ರಾಣೆಬೆನ್ನೂರ ಸರ್ವೆ ನಂಬರ 791/ಕ ನೇದ್ದರಲ್ಲಿ ಸೈಟುಗಳನ್ನು ಮಾಡಿ, ವಿಭಾಗದಲ್ಲಿ ದೂರುದಾರರಿಗೆ ಬಂದಂತಹ ಸೈಟುಗಳನ್ನು ಮಾರಾಟ ಮಾಡಲು ನೋಡಿದಾಗ, ನಾನು ರಾಣೆಬೆನ್ನೂರಿಗೆ ಬಂದು ಅವುಗಳನ್ನು ನೋಡಿ ಹೋಗಿ ಆ ವ್ಯವಹಾರದಲ್ಲಿ ಭಾಗವಹಿಸಿದ್ದೆ ಎಂದರೆ ಸರಿಯಲ್ಲ. ಈ ಹಿನ್ನಲೆಯಿಂದ ದೂರುದಾರರು ನನಗೆ ಸುಮಾರು 7-8 ವರ್ಷಗಳಿಂದ ಪರಿಚಯ ಇರುತ್ತಾರೆ ಎಂದರೆ ಸರಿಯಲ್ಲ. ಈ ಹಿನ್ನಲೆಯಲ್ಲಿ ನಾನು ದೂರುದಾರರೊಂದಿಗ ವಿಶ್ವಾಸಿಕನಾಗಿದ್ದು, ಆಗಾಗ ನನಗೆ ಹಣಕಾಸಿನ ಅಡಚಣೆ ಆದಾಗ, ಅವರಿಂದ 50 ಸಾವಿರ ರೂ. ಹಾಗೂ 1 ಲಕ್ಷರಂತೆ ಸಾಲ ಪಡೆದು, ವಾಪಸ್ಸು ಕೊಡುತ್ತಾ ಬಂದಿದ್ದೆ ಎಂದರೆ ಸರಿಯಲ್ಲ.

3. ನನ್ನ ಹಾರ್ಡವೇರ್ ಉದ್ಯೋಗದ ಸಲುವಾಗಿ ಹಣದ ಅವಶ್ಯಕತೆ ಇದೆ ಅಂತಾ ಹೇಳಿ ದಿನಾಂಕ 12-03-2021 ರಂದು ದೂರುದಾರರಿಂದ ರೂ. 5 ಲಕ್ಷ ಕೈಗಡ ಸಾಲ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ 5 ಲಕ್ಷ ಹಣದ ಭದ್ರತೆಗಾಗಿ ನಾನು ನಿಪಿ-1 ಚೆಕ್ಕನ್ನು ದೂರುದಾರರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಕರಾರಿನ ಪ್ರಕಾರ 6 ತಿಂಗಳೊಳಗಾಗಿ ದೂರುದಾರರಿಗೆ ನಾನು ಹಣ ವಾಪಸ್ಸು ಕೊಡದೇ ಇದ್ದುದರಿಂದ, ದೂರುದಾರರಿಗೆ ಸದರಿ ಚೆಕ್ಕನ್ನು ಬ್ಯಾಂಕಿಗೆ ಹಾಜರು ಪಡಿಸಿ ಅಂತಾ ನಿರ್ದೇಶನ ಮಾಡಿದ್ದೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯ ಮೇರೆಗೆ ದೂರುದಾರರು ಚೆಕ್ಕನ್ನು ಬ್ಯಾಂಕಿಗೆ ಹಾಜರು ಪಡಿಸಿದ್ದು, ಅದರೆ ಸದರಿ ಚೆಕ್ಕು ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಅಂತಾ

ವಾಪಸ್ಸು ಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ದೂರುದಾರರು ನನಗೆ ವಕೀಲರ ಮುಖಾಂತರ ಪೂರ್ವಭಾವಿ ನೋಟೀಸು ಕೊಟ್ಟಿದ್ದು, ಅದು ನನಗೆ ತಲುಪಿದ್ದರೂ ಸಹಾ, ತಲುಪಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಚೆಕ್ಕನ್ನು ದೂರುದಾರರಿಗೆ ಏಕೆ ಕೊಟ್ಟಿದ್ದೀರಿ ಮತ್ತು ನನ್ನ ಚೆಕ್ಕನ್ನು ನನಗೆ ವಾಪಸ್ಸು ಕೊಡಿರಿ ಅಂತಾ ನಾನು ಮೌಲಾಸಾಬ ಗಣಜೂರರವರಿಗೆ ಯಾವುದೇ ನೋಟೀಸು ಕೊಟ್ಟಿಲ್ಲ ಮತ್ತು ಅವರ ವಿರುದ್ಧ ಯಾವುದೇ ಕಾನೂನಿನ ಕ್ರಮ ಕೈಕೊಂಡಿಲ್ಲ. ಮೌಲಾಸಾಬ ಗಣಜೂರವರು ನನಗೆ ಸಂಬಂಧಿಕರಲ್ಲ, ಪರಿಚಯಸ್ಥರು. ದೂರುದಾರರ ಹಣವನ್ನು ಎತ್ತಿ ಹಾಕುವ ಉದ್ದೇಶದಿಂದ ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂಬರ 3 ರಲ್ಲಿರುವ ವಿಷಯಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಮೌಲಸಾಬ ಗಣಜೂರವರೂ ಸಹಾ ದೂರುದಾರರೊಂದಿಗೆ ವ್ಯವಹಾರ ಮಾಡಿದ್ದು, ಇಬ್ಬರೂ ಸೇರಿ ದೂರುದಾರರ ಹಣವನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಅವಶ್ಯಕತೆಯ ಸಲುವಾಗಿ ದೂರುದಾರರಿಂದ 5 ಲಕ್ಷ ರೂ. ಕೈಗಡ ಸಾಲ ಪಡೆದುಕೊಂಡಿದ್ದು, ಅದನ್ನು ಮರುಪಾವತಿ ಮಾಡಲು ಬಾಧ್ಯಸ್ಥನಾಗಿದ್ದೇನೆ ಎಂದರೆ ಸರಿಯಲ್ಲ. ಮೌಲಾಸಾಬ ಗಣಜೂರವರಿಗೆ ಯಾವುದೇ ಚೆಕ್ಕು ಕೊಟ್ಟಿಲ್ಲ, ದೂರುದಾರರಿಗೆ ಕೊಟ್ಟಿದ್ದರೂ ಸಹಾ, ಚೆಕ್ಕನ್ನು ಮೌಲಾಸಾಬ ಗಣಜೂರವರಿಗೆ ಕೊಟ್ಟಿದ್ದೆ ಅಂತಾ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.